09-01-2000

ಅಜ್ಜ ಮಾಗಡಿಗೆ ಹೋಗಿದ್ದಾಗ.
ಸಮಯ – ೧೧–೪೫ ಬೆಳಗ್ಗೆ.

ಅಜ್ಜ – ದೃಷ್ಟಿಯನ್ನು ಒಳಗೆ ಹಾಕಿದಾಗ ಮಾತ್ರ ನಮ್ಮನ್ನು ನಾವು ಅರಿಯಲಿಕ್ಕೆ ಸಾಧ್ಯ ಉಂಟು. ನಾವೆಲ್ಲ ಜನ್ಮಕ್ಕೆ ಬಂದಿದ್ದೇವೆ. ಆ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕಾದ್ರೆ ಮನಸ್ಸನ್ನು ಅಂತರ್ಮುಖ ಮಾಡಿ ತನ್ನಲ್ಲಿ ತಾನು ಇರುವಂಥಾ ಒಂದೇ ಒಂದು ವಿದ್ಯೆ ಸಾಕಪ್ಪ. ಬಾಕಿ ವಿದ್ಯೆಗಳೆಲ್ಲ, ಯಾವ ವಿದ್ಯಾವಂತರು ಉದ್ಯೋಗಸ್ತರು ತುಂಬಾ ಜನ ಇರ್ಬಹುದು ಯಾರೂ ಬೇಸರ ಮಾಡಕೊಳ್ಳಿಕ್ಕೆ ಕೂಡ್ದು, ಬಾಕಿ ವಿದ್ಯೆಗಳೆಲ್ಲ ದೇಹ ಪೋಷಣೆಗೆ ಇರುವಂಥಾದ್ದು. ನಮ್ಮನ್ನು ನಾವು ತಿಳಿಯಲಿಕ್ಕಾಗಿ ನಾವೆಲ್ಲಾ ಜನ್ಮಕ್ಕೆ ಬಂದಿದ್ದೇವೆ. ಇಡೀ ಮಾನವ ಜನಾಂಗಕ್ಕೆ ಹೇಳುವಂಥಾದ್ದು. ಇಲ್ಲಿ (ಹೃದಯವನ್ನು ತೋರಿಸಿ) ಒಂದು ಶಕ್ತಿ ಉಂಟು. ಅದು ಈ ದೇಹದ ಮೂಲಕ ಮಾತುಗಳನ್ನ ಹೊರಹಾಕ್ತದೆ. ನಾನು ದೇಹವಲ್ಲ. ದೇಹದಲ್ಲಿರುವವನು ನಾನು. ಈ ಮನಸ್ಸು ಬುದ್ಧಿಗೆ ಅದು ಎಟುಕೋದಿಲ್ಲ. ಮತ್ತೆ . . . ಆ್ಞಂ ಸಾಕಪ್ಪ. ಸ್ವಲ್ಪ ಭಜನೆ ಮಾಡಿ.

ಭಜನೆ – "ದೇವದೇವನೆ ನಿಜವನರಿಯಲು ಮನಸು ತೊಳಲುತ ಬಳಲಿದೆ" ಹಾಡಿದರು.

ಅಜ್ಜ – ಮನಸ್ಸು ಬಳಲಿ ಬಳಲಿ ಬಳಲಿ ಆಖೇರಿಗೆ ಒಳಗೆ ಹೋಗಿ ನಿಂತಾಗ ಗೋಚರವಾಕ್ತದೆ. ಹೊರಗಡೆ ಹುಡುಕುವಂಥಾದ್ದಲ್ಲ. ದೇಹ ಪೋಷಣೆಗಿರುವಂಥಾ ಯಾವತ್ತೂ ಸಲಕರಣೆಗಳು ಆ್ಞಂ ಶೋಧಕನು ಶೋಧಿಸಲ್ಪಡುವವನೇ ಆದಾಗ, ನೋಡಿ ಅಲ್ಲಿ ವಿಚಾರಗಳುಂಟು. ಸಾಧನೆಯಿಂದ ದೊರಕುವಂಥಾದ್ದಲ್ಲ ಇದು. ಬರೀ ಶೋಧನೆಯಿಂದ. ಅತೀ ಸುಲಭ ಮತ್ತು ನೇರವಾದ ದಾರಿ ಆ್ಞಂ. ಈ ಜಗತ್ತು ಅಸತ್ಯ ಎಂಬುದನ್ನು ಪ್ರತಿಯೊಬ್ಬರು ನಂಬಿದ್ದಾರಂತೆ. ನಮಗ್ಗೊತ್ತಿಲ್ಲ. ಜಗತ್ತಾಣೆ ಹೇಳ್ತದೆ. ಇದು ಅಸತ್ಯಾ ಅಂತ್ಹೇಳಿ. 'ಅಸತೋಮಾ ಸದ್ಗಮಯ' ಅಂದ್ರೆ ಏನದರ ಅರ್ಥ. ಅಸತ್ತಿನಿಂದ ಸತ್ಯದ ಕಡೆಗೆ ನನ್ನನ್ನು ಕೊಂಡುಹೋಗು. ಹಾಗಾದ್ರೆ ಹೋಗುವವ ಒಬ್ಬ ಇದ್ದಾನೆ. ಕರೆದುಕೊಂಡು ಹೋಗುವವ ಒಬ್ಬ ಇದ್ದಾನೆ. ಗುರಿ ಒಂದುಂಟು. ಹೋಗುವವನು ಯಾರು? ಜೀವಾತ್ಮ. ಕರಕೊಂಡು ಹೋಗುವವನು ಪರಮಾತ್ಮ. ಗುರಿ ಆತ್ಮ. ಸತ್ಯ, ಬೆಳಕು, ಬದುಕು, ಅದು. ಅವ ಕರಕೊಂಡು ಹೋಗ್ಲಿಕ್ಕೆ ಏನಾಗ್ಬೇಕು. ನಾವು ಅವನ ಸಮೀಪಕ್ಕೆ ಹೋಗ್ಬೇಕು. ಅವನ ಸಮೀಪಕ್ಕೆ ಹೋದಾಗ ಮತ್ತೆ ನಾನು ಅಂದ್ರೆ ಅವನೆ. ಅವನ ಜೊತೆಯಲ್ಲಿ ಹೋಗುವಾಗ ಗುರಿಯ ಕಡೆ ಹೋಕ್ತದೆ. ಜೀವಾತ್ಮನೂ ಇಲ್ಲ, ಮತ್ತೆ . . .

ಜನರು – ಪರಮಾತ್ಮನೂ ಇಲ್ಲ.

ಅಜ್ಜ – ಆ್ಞಂ. ಹೌದಾ – ಸಾಕು. ಭಜನೆ ಮಾಡಿ.

ಜನರು – "ಉತ್ತಿಷ್ಠತಾ ಜಾಗೃತಾ ಮನುಜಾ ಉತ್ತಿಷ್ಠತಾ ಜಾಗೃತ" ಹಾಡಿದರು.

ಅಜ್ಜ – ಜಾಗೃತವಾಗಲಿಕ್ಕೆ ಏನಾಗ್ಬೇಕಪ್ಪ. ಆ್ಞಂ, ಅಧೋಮುಖವಾಗಿರುವ ಜೀವಾತ್ಮನನ್ನು ಊರ್ಧ್ವಮುಖನನ್ನಾಗಿ ಮಾಡಿದಾಗ ಅವ ಜಾಗೃತನಾಗ್ತಾನಪ್ಪ. ಅದಕ್ಕೋಸ್ಕರ ಈ ಮನಸ್ಸನ್ನು ಒಳಗಿರುವ ಶಕ್ತಿಯ ಮೇಲೆ ಕೇಂದ್ರೀಕರಿಸುವಂಥಾದ್ದು. ಬಂಧನಕ್ಕೂ ಬಿಡುಗಡೆಗೂ ಕಾರಣ ಮನಸ್ಸು. ಬಂಧನದಲ್ಲಿದ್ದ ಆ ಜೀವಾತ್ಮನನ್ನು ಜಾಗೃತಗೊಳಿಸಬೇಕು. ಜಾಗೃತವಾದಮೇಲೆ. ಅವ ಅಲ್ಲಿ ನಿಲ್ಲೋದಿಲ್ಲ. ಅವನಿಗೆ ಎಚ್ಚರಿಕೆ ಆಯ್ತು. ಅವ ಮೆಲ್ಲಕ್ಕೆ ಇಲ್ಲಿಂದ ಹೊರಟುಬಿಟ್ಟ. ಎಲ್ಲಿಗೆ? ಆ ದಾರಿ ತೋರಿಸುವವ ಒಬ್ಬ ಇದ್ದಾನಲ್ಲ. ಅಲ್ಲಿಗೆ ಹೋಗಿಬಿಟ್ಟ. ಅಲ್ಲಿಗೆ ನಿಲ್ಲಲಿಲ್ಲ. ನೋಡಿ ಅಲ್ಲಿಗೆ ನಿಲ್ಲಲಿಲ್ಲ. ಅವನಿಗೆ ಇಲ್ಲಿ (ದೇಹವನ್ನು ತೋರಿಸುತ್ತಾ) ಬರಲಿಕ್ಕೆ ಎಡೆಯಾಯ್ತು. ಬಿಡುಗಡೆ ಹೊಂದಲಿಕ್ಕೆ ಈ ದೇಹ ಎಡೆಯಾಯ್ತು. ಅವ ಬಂದ. ಅವ ಬಂದುಬಿಟ್ನಪ್ಪ. ಏನು ಹೇಳ್ತಾನೆ ಬಂದ ಮೇಲೆ, ಪುನಃ ಬಂದೆ, ಆ್ಞಂ. ಪುನಃ ಬಂದೆ, ಪುನಃ ಬಂದೆನೂsss, ತಿರುಗಿ ಬಂದೆ, ತಿರುಗಿ ಬಂದೆ, ತಿರುಗಿ ಬಂದೆನೂsss, ಹೇಗೇಳ್ತಾನೆ . . . . ಪುನಃ ಬಂದೇss, ಪುನಃ ಬಂದೇsss, ಪುನಃ ಬಂದೆನೂsssssss, ತಿರುಗಿ ಬಂದೇss, ತಿರುಗಿ ಬಂದೇss, ತಿರುಗಿ ಬಂದೆನೂssssss. ಹೇಗೆ ಬಂದ? ಕಲುಹಿಸಲ್ಪಟ್ಟ. ಆ ಕಳುಹಿಸಲ್ಪಟ್ಟವನು ಕಳುಹಿಸಿದವನು ಒಬ್ಬನೆ. ಆದರೂ ಪ್ರಪಂಚಕ್ಕಾಗಿ ಕಳುಹಿಸಲ್ಪಟ್ಟವನು ಎಂಬ ಮಾತುಗಳು ಇಲ್ಲಿಂದ ಬತ್ತಾ ಇದೆಯಪ್ಪ. ಇದು ಎಲ್ಲಿಂದ ಬರುವ ಮಾತು. ಆ್ಞಂ. ಅಲ್ಲಿಂದ ಅಲ್ಲ. ಅಲ್ಲಿಂದ ಇಲ್ಲಿ ಹೊಡೆದು (ದೇಹವನ್ನು ತೋರಿಸುತ್ತಾ) ಇಲ್ಲಿಂದ ಪ್ರತಿಧ್ವನಿಸುತ್ತದೆ. ಎಲ್ರಲ್ಲಿಯೂ ಅದುಂಟು. ಆ್ಞಂ. ಹಾಡಿ . . .

ಜನರು – ಭಜನೆ – ೧. ಏನು ನಿರುಪಮ ಸೊಬಗು ಓಹೋ ಎಂಥ ಚಲುವಿನ ಮೋಹನ
೨. ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ.

ಅಜ್ಜ – ಚಪ್ಪಾಳೆ ತಟ್ಟುತ್ತಾ, ನಗುತ್ತಾ, ಕುಣಿಯುತ್ತಾ ಹೊರಟರು.

*****